ಸರಣಿ ಎ.ಟಿ.ಎಮ್ & ಬ್ಯಾಂಕ್ ಕಳವು ಮಾಡಲು ಪ್ರಯತ್ನಿಸುತ್ತಿದ್ದ ಕುಖ್ಯಾತ್ ಕಳ್ಳನನ್ನು ಬಂಧಿಸುವಲ್ಲಿ ಯಶಸ್ವಿಯಾದ ರೋಜಾ ಪೊಲೀಸ್ ಠಾಣೆಯ ಪೊಲೀಸರು.

ರೋಜಾ ಪೊಲೀಸ್ ಠಾಣೆ ಕಲಬುರಗಿ ನಗರ, ಇಂದು ದಿನಾಂಕ: ೩೦/೦೭/೨೦೨೧ ರಂದು ಬೆಳಗಿನ ಜಾವ ೬.೦೦ ಗಂಟೆಯ ಸುಮಾರಿಗೆ ಕಾರ್ಯಚರಣೆ ನಡೆಸಿ ಹಾಗರಗಾ ಕ್ರಾಸ್ ಹತ್ತಿರ ಸಂಶಯಾಸ್ಪದವಾಗಿ ತಿರುಗಾಡುತ್ತಿದ್ದ, ಶೇಖ ಆವೇಜ್ ತಂದೆ ಮಹ್ಮದ ಅಫ್ಸರ ವಯಾ: ೨೦ವರ್ಷ ಉ: ಬೇಕಾರ ಸಾ: ಖಮರ ಕಾಲೋನಿ ಕಲಬುರಗಿ ನಗರ ಈತನನ್ನು ಹಿಡಿದುಕೊಂಡು ವಿಚಾರಣೆಗೊಳಪಡಿಸಿದಾಗ , ಆತನು ಹಾಗೂ ಆತನ ಗೆಳೆಯನಾದ ಮೋಸಿನ ಚಾವುಸ್ ಸಾ: ಮಹಿಬೂಬ ನಗರ ಕಾಲೋನಿ ಇಬ್ಬರೂ ಕೂಡಿಕೊಂಡು ಕಳೆದ ೦೭ ತಿಂಗಳಿನಿಂದ ಕಲಬುರಗಿ ನಗರದ *ರೋಜಾ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ (ರ್ನಾಟಕ ಬ್ಯಾಂಕ್ ನೇಹರು ಗಂಜ್ ಕಳ್ಳತನ ಮಾಡಲು ಪ್ರಯತ್ನಿಸಿದ ಪ್ರಕರಣ, ಎಕ್ಸಿಸ್ ಬ್ಯಾಂಕ್ ಎ.ಟಿ.ಎಮ್ ನೇಹರು ಗಂಜ್, ಎರಡು ಕೆನರಾ ಬ್ಯಾಂಕ್ ಎ.ಟಿ.ಎಮ್ ಕಳ್ಳತನ ಮಾಡಲು ಪ್ರಯತ್ನಿಸಿದ ಪ್ರಕರಣಗಳು) ಹೀಗೆ ಒಟ್ಟು ೦೪ ಪ್ರಕರಣಗಳು , *ಬ್ರಹ್ಮಪೂರ ಪೊಲೀಸ್ ಠಾಣೆ (ಎಸ್.ಬಿ.ಐ ಬ್ಯಾಂಕ್ ಮೇನ್ ಬ್ರ್ಯಾಂಚ್ ಮರ್ಕೆಟ್ ಕಲಬುರಗಿಯ ಎ.ಟಿ.ಎಮ್ ಕಳ್ಳತನ ಮಾಡಲು ಪ್ರಯತ್ನಿಸಿದ ಪ್ರಕರಣ) ೦೧ ಪ್ರಕರಣ ಹಾಗೂ *ಗ್ರಾಮೀಣ ಠಾಣೆ ಕಲಬುರಗಿ ನಗರದಲ್ಲಿ (ಎಕ್ಸಿಸ್ ಬ್ಯಾಂಕ್ ಆರ.ಸ್. ಕಾಲೋನಿ ಎ.ಟಿ.ಎಮ್ ಕಳ್ಳತನ ಮಾಡಲು ಪ್ರಯತ್ನಿಸಿದ ಪ್ರಕರಣ) ೦೧ ಪ್ರಕರಣ ಈ ರೀತಿಯಾಗಿ ಹೀಗೆ ಒಟ್ಟು ೦೬ ಪ್ರಕರಣಗಳಲ್ಲಿ ಶ್ಯಾಮಿಲಾಗಿದ್ದು, ಕಲಬುರಗಿ ನಗರದ ಬ್ಯಾಂಕ್ & ಎ.ಟಿ.ಎಮ್ ಕಳ್ಳತನ ಮಾಡಲು ಪ್ರಯತ್ನಿಸಿದ್ದು ಇರುತ್ತದೆ. ಸದರಿ ಆರೋಪಿ ಶೇಖ ಆವೇಜ್ ಈತನಿಂದ ಕೃತ್ಯಕ್ಕೆ ಬಳಸಿದ *ಒಂದು ಚಾಕು,*ಒಂದು ಕಬ್ಬಿಣದ ರಾಡ್, * ಕೃತ್ಯಮಾಡಲು ಬಳಸಿದ ದ್ವಿಚಕ್ರವಾಹನ ಹೊಂಡಾ ಎವಿಯೇಟರ್ ನೇದ್ದವುಗಳನ್ನು ಜಪ್ತಿಪಡಿಸಿಕೊಂಡು ಸದರಿ ಆರೋಪಿತನ ವಿರುದ್ಧ ಕಾನೂನು ಕ್ರಮ ಕೈಕೊಂಡು ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದು ಇರುತ್ತದೆ. ಕುಖ್ಯಾತ ಸರಣಿ ಬ್ಯಾಂಕ್ & ಎ.ಟಿ.ಎಮ್ ಕಳ್ಳತನ ಮಾಡಲು ಪ್ರಯತ್ನಿಸುತ್ತಿದ್ದ ಆರೋಪಿತನನ್ನು ಬಂಧಿಸಲು, ಮಾನ್ಯ ಪೊಲೀಸ್ ಆಯುಕ್ತರು ಕಲಬುರಗಿ ನಗರ , ಮಾನ್ಯ ಉಪ ಪೊಲೀಸ್ ಆಯುಕ್ತರು (ಕಾ&ಸು) (ಅ&ವಿ) ಹಾಗೂ ಮಾನ್ಯ ಸಹಾಯಕ ಪೊಲೀಸ್ ಆಯುಕ್ತರು (ಬಿ) ಉಪವಿಭಾಗ ರವರ ಮಾರ್ಗದರ್ಶನದಲ್ಲಿ ಎಸ್.ಅಸ್ಲಾಂಬಾಷ ಪಿಐ ರೋಜಾ ಠಾಣೆ ಹಾಗೂ ಸಿಬ್ಬಂದಿಯವರಾದ ಶಿವಪ್ಪ ಕಮಾಂಡೋ, ಸಿಕಂದರಖಾನ್, ರಫೀಕ, ಮದರಸಾಬ, ನಿತ್ಯಾನಂದ, ಗೋಪಾಲ, ಈರಣ್ಣ, ಶರಣು ಇವರ ನೇತೃತ್ವದಲ್ಲಿ ಕರ್ಯಾಚರಣೆ ನಡೆಸಿ ಆರೋಪಿತನನ್ನು ಬಂಧಿಸುವಲ್ಲಿ ಯಶಸ್ವೀಯಾಗಿರುತ್ತಾರೆ.